MYSORE LEGISLATIVE ASSEMBLY

FIFTH DAY.

Monday, 27th February 1956.

The House met in the Legislative Assembly Hall, Atara Katcheri, Bangalore, at Five Minutes past Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

CONDOLENCE RESOLUTION

Re: Demise of Sri Mavalankar, Speaker of Lok Sabha.

Sri K. HANUMANTHAIYA (Leader of the House).—Sir, today happens to be a very sad day in our history. One of the national figures has passed away this morning. He is no less a person than the presiding officer of the Lok Sabha, the highest legislative authority under the Constitution in India. Sri Mavalankar who was the Speaker of the Lok Sabha was the Speaker from its very inception. Before that, he was the Speaker of the old Legislative Assembly. Prior to that, he was the Speaker of the Bombay Legislative Assembly. For the last about 20 years he was the Speaker either of the Bombay Legislative Assembly or Indian Legislative Assembly or the Parliament of India which lately was designated as Lok Sabha. It is very difficult to find another instance where a person has performed the duties of these high offices for such a long time. It is not merely length of time that is the distinguishing feature of this person. Every Assembly over which he presided had the highest respect for him. He was impartial, he was earnest, he was more than all so alert about the proceedings of the House that he knew everything that was happening on the floor of the House. I had occasion to see the display of his great qualities as a member of the Parliament. For four years I sat in the Parliament and he was Speaker. Many a time I thought within myself: What are the qualities that should be found in a perfect Speaker? And what are the qualities that should be found in a perfect Chief Whip? In all my experience I have never found two persons who were surpassed by any others in India in holding these two offices. One was Sri Mavalankar, the Speaker of the Lok Sabha, and the other was Sri Satya Narayana Sinha, the Chief Whip of the Parliament, who is happily still with us. There are some persons who grow so perfect in the discharge of their duties or the offices they hold that people come to think that they are irreplaceable. It is not experience that will make the people like that. There is what is called spontaneous upsurge of opinion that delineates characters in this fashion. Everyone in India agrees today that no better person can be found to occupy the office of the Speaker as the departed Sri Mavalankar did. Sri Mavalankar in passing away has left the whole of India in bereavement. It is not merely his family; all the Legislatures in India today mourn his death. As we are all aware, the legislatures in India together with the Parliament are the highest authorities under the Constitution and these Assemblies and the Parliament mourn his death very sincerely. That is an enough tribute for any person to earn. Before he became Speaker, Sir, he was actively in the political world. He was one of the direct disciples of Mahatma Gandhi. Sri Mavalankar happened to be a citizen of the Ahmadabad Town and Mahatmaji lived in the Sabarmathi Ashram for a very long time. Sri Mavalankar was one of the lieutenants

(SRI K. HANUMANTHAIYA.)

of Sardar Vallabhbhai Patel, the architect of Indian unity. When Sardar Vallabhbhai Patel was the President of the Ahmadabad Town Municipality, Mavalankar was his executive officer. He served under him. Later when Sardar Patel had to leave that office for higher work outside, Mavalankar himself succeeded him as President of the Ahmadabad Town Municipality. He did his work with such great distinction that the next elections brought him to the legislature. Besides his political activities, he was actively associated with every constructive work that Gandhiji sponsored. Later when Gandhiji passed away and a big memorial fund was raised in his memory, no person was found more fit to become the head of the Committee and to administer that fund than Sri Mavalankar. He has done great and lasting work in the field of social and constructive work. In him we lose a great Gandhian patriot. Personally, it is a big loss to me, for I have lost a personal friend. I had the good fortune of being in a delegation to Inter-Parliamentary Conference at Dublin. It consisted of three persons—Sri Mavalankar, Sri Srinivasa Mallya and myself. I had occasion to move intimately and closely every day during my trip to Europe. We stayed in Dublin for fifteen days and jointly worked in the Inter-Parliamentary Conference that was held there. The more and more I saw of him, the more and more I respected him for his qualities of head and heart. Every time I went to Delhi, we had such great affection that it was a pleasure for me to go and meet him and talk to him. Today I mourn his loss national and personal.

Sir, I am certain this House is feeling likewise. Besides that, when the presiding officer of the highest legislative body passes away, it is our duty to pay homage to his memory. This is one of the ways of safeguarding the great dignity and role that the legislatures have to play in the present set up. I therefore seek your permission, Sir, and the permission of this Hon'ble House to move this resolution:

"This House do stand adjourned for the day as a mark of respect to the memory of Sri G. V. Mavalankar, Speaker, Lok Sabha, who passed away this morning.

This House requests the Speaker to convey to the members of the bereaved family its sincere condolences."

MR. SPEAKER.—Resolution moved:

"This House do stand adjourned for the day as a mark of respect to the memory of Sri G. V. Mavalankar, Speaker, Lok Sabha, who passed away this morning.

This House requests the Speaker to convey to the members of the bereaved family its sincere condolences."

SRI S. SRINIVASA IYENGAR (T.-Narsipur).—Sir, as the Leader of my Party is unfortunately absent, I hasten to associate myself with the sense of sorrow expressed by the Leader of the House. Sir, as has already been said, we have lost in Mavalankar a great man and the first Speaker of the Parliament of India. Though the rulings given by Sri Mavalankar as the First Speaker may not have always helped the Opposition, the Opposition had full confidence in him. Sri Mavalankar upheld the dignity of the Parliament. We have lost a great man and two of them in the course of this month—one Acharaya Narendra Deva and now Sri Mavalankar. As Sri Jawaharlal Nehru has put it, one by one the tried workers have been passing away creating voids which the seniormost who live yet should fill up.

*ಶ್ರೀ ಎಸ್. ಗೋಪಾಲಗೌಡ (ಸಾಗರ–ಹೊಸನಗರ).—ಈ ದಿನ ನಮ್ಮ ದೇಶ ತನ್ನ ಪ್ರಮುಖ ವ್ಯಕ್ತಿಗಳಲ್ಲಿ ಒಬ್ಬರನ್ನು ಕಳೆದುಕೊಂಡು ಇಂದು ತುಂಬ ಬಾರದ ಒಂದು ನಷ್ಟವನ್ನು ಶ್ರೀಯುತ ಮಾವಳಂಕರರ ಮರಣದಿಂದ ಹೊಂದಿದೆ. ಈಗತಾನೇ ನಾವು ಒಂದು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಮುಂದುವರಿಯುತ್ತಿರುವ ವೇಳೆಯಲ್ಲಿ ಶ್ರೀಯುತ ಮಾವಳಂಕರರಂಥ

* Asterisk indicates that the speeches have not been revised by the Member concerned.

ಮೇಧಾವಿಗಳು ಮತ್ತು ದೇಶದ ಅಭ್ಯುದಯವನ್ನು ಯಾವತ್ತೂ ಹೃದಯದಲ್ಲಿ ಇಟ್ಟುಕೊಂಡು ಅದಕ್ಕಾಗಿ ಶ್ರಮಿಸಿದಂತಹ ವ್ಯಕ್ತಿಗಳು ಹೆಚ್ಚು ಸಂಖ್ಯೆಯಲ್ಲಿ ನಮಗೆ ದೊರೆಯುವುದಿಲ್ಲ, ಮುಖ್ಯವಾಗಿ ಪಾರ್ಲಿಮೆಂಟಿನಂಥ ಒಂದು ಸಭೆಯನ್ನು ಶ್ರೀಯುತ ಮಾವಳಂಕರರು ನಡೆಸಿಕೊಂಡು ಹೋಗುತ್ತಿದ್ದ ರೀತಿ ನಮ್ಮ ದೇಶದ ಜನರಿಂದ ಮಾತ್ರವಲ್ಲ ಪರರಾಷ್ಟ್ರಗಳಲ್ಲಿ ಕೂಡ ಅವರು ಬಹಳ ದಕ್ಷ ಅಧ್ಯಕ್ಷರಾಗಿ ವರ್ತಿಸುತ್ತಿದ್ದಾರೆ ಎನ್ನುವುದಕ್ಕೆ ಪ್ರಶಂಸೆಗಳಿವೆ. ನನಗೆ ಹೆಚ್ಚಾಗಿ ಅವರ ಸಂಪರ್ಕವನ್ನು ಹೊಂದುವ ಸೌಭಾಗ್ಯವಿಲ್ಲದೆ ಹೋದರೂ ಪಾರ್ಲಿಮೆಂಟ್ ಸಭೆಗೆ ನಾವು ಹೋಗಿದ್ದಾಗ ಒಂದೆರಡು ದಿನಗಳಕಾಲ ಅವರು ಯಾವ ರೀತಿ ಸಭೆಯನ್ನು ನಡೆಸಿಕೊಂಡು ಹೋಗುತ್ತಿದ್ದರು ಎನ್ನುವುದನ್ನು ನಾನು ನೋಡಿದ್ದೇನೆ.

ಅವರು ಬರೀ ಅಧ್ಯಕ್ಷರಾಗಿ ಮಾತ್ರವಲ್ಲದೆ ಅವರ ಹೆಚ್ಚಿನ ಪರಿಚಯ ಪಡೆದ ಈ ಸಭೆಯ ನಾಯಕರು ತಮ್ಮ ಸಂತಾಪವನ್ನು ವ್ಯಕ್ತಪಡಿಸುವಾಗ ಅವರ ಗುಣಗಳನ್ನು ಪ್ರಶಂಸಿಸಿರುವಂತೆ, ಕಳೆದ 30-40 ವರ್ಷಗಳಿಂದಲೂ ಅವರು ನಮ್ಮ ರಾಷ್ಟ್ರದ ಜೀವನದಲ್ಲಿ, ರಾಷ್ಟ್ರದ ಹೋರಾಟದಲ್ಲಿ ಮತ್ತು ದೇಶದ ಭವಿಷ್ಯವನ್ನು ರೂಪಿಸುವ ಸತ್ಕಾರ್ಯದಲ್ಲಿ ಯಾರಿಗೂ ಕಡಮೆಯಿಲ್ಲದಂತೆ ದುಡಿದಿದ್ದಾರೆ. ಅಂಥ ಮಹಾ ವ್ಯಕ್ತಿಗಳಾದ ಶ್ರೀ ಮಾವಳಂಕರರವರು, ನಿಧನಹೊಂದಿದುದು ನಮ್ಮ ದೇಶದ ರಾಜಕಾರಣಕ್ಕೆ, ಮುಖ್ಯವಾಗಿ ಪ್ರಜಾಪ್ರಭುತ್ವಕ್ಕೆ, ಒಂದು ದೊಡ್ಡ ಪೆಟ್ಟು ಬಿದ್ದಂತಾಗಿದೆಯೆಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು. ಈಚೆಗೆ ದೆಹಲಿಯಲ್ಲಿ ಆರಂಭವಾದ ಸೆಮಿನಾರ್ ಒಂದಕ್ಕೆ ಅವರು ತಮ್ಮ ಸಂದೇಶವನ್ನು ಕಳುಹಿಸಿ, ಅದರಲ್ಲಿ 'ಅಧ್ಯಕ್ಷರು ನೇರವಾಗಿ ಸರ್ಕಾರದ ರೀತಿನೀತಿಗಳನ್ನು ರೂಪಿಸಲು ಹೋಗದಿದ್ದರೂ ಕೂಡ ಅಪ್ರತ್ಯಕ್ಷವಾಗಿ ಅವರ ವ್ಯಕ್ತಿತ್ವ ತುಂಬ ಪ್ರಭಾವ ಪೂರ್ಣವು, ಅಧ್ಯಕ್ಷರ ಒಂದು ನಿಷ್ಪಕ್ಷಪಾತ ದೃಷ್ಟಿ ಮತ್ತು ಅವರಿಗಿರತಕ್ಕಂಥ ಅಸಾಮಾನ್ಯ ಅಧಿಕಾರ ಇವನ್ನು ಅವರು ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ಉಪಯೋಗಿಸಿ, ಪ್ರಜಾಪ್ರಭುತ್ವದಲ್ಲಿ ಆಳುವ ಪಕ್ಷಕ್ಕೂ ಮತ್ತು ವಿರೋಧಪಕ್ಷಕ್ಕೂ ನರಿಯಾದ ರೀತಿಯಲ್ಲಿ ಮಧುರ ಬಾಂಧವ್ಯ ಬೆಳೆದು ಬರುವಂತೆ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕು' ಎಂದು ತಿಳಿಸಿದ್ದಾರೆ. ಅದು ಪ್ರಪಂಚಕ್ಕೆ, ಮುಖ್ಯವಾಗಿ ಪ್ರಜಾಪ್ರಭುತ್ವಕ್ಕೆ, ಅವರ ಕೊನೆಯ ಸಂದೇಶ ಎಂದು ನಾನು ಭಾವಿಸುತ್ತೇನೆ. ಅಂತಹ ಒಬ್ಬ ಮಹಾವ್ಯಕ್ತಿಯನ್ನು ಕಳೆದುಕೊಂಡ ನಾವು ದೌರ್ಭಾಗ್ಯರೆಂತಲೇ ಹೇಳಬೇಕು. ಅವರು ಈಚೆಗೆ ಆನಾರೋಗ್ಯದ ನಿಮಿತ್ತ ನರಳುತ್ತಿದ್ದರು. ಆದರೂ ಅವರಿಗೆ ಆರೋಗ್ಯ ದೊರಕಿ ಪುನಃ ಅವರು ಲೋಕ ಸಭೆಯ ಕಾರ್ಯಕರಾಪಗಳನ್ನು ಇನ್ನೂ ಅನೇಕ ವರ್ಷಗಳ ಕಾಲ ನಡೆಸಿಕೊಂಡು ಹೋಗಿ ಒಂದು ಬಾಲ್ಯಾವಸ್ಥೆಯಲ್ಲಿ ಬೆಳೆದು ಬರುತ್ತಿರತಕ್ಕ ಪ್ರಜಾಪ್ರಭುತ್ವಕ್ಕೆ ಹೆಚ್ಚಿನ ಒಂದು ಮಾರ್ಗದರ್ಶನ ನೀಡುತ್ತಾರಾಗಿ ನಾವು ಆಶಿಸಿದ್ದೆವು. ಆ ಆಶೆ ನೆರವೇರಲಿಲ್ಲ. ಅದಕ್ಕಾಗಿ ನಾವೆಲ್ಲರೂ ಇಂದು ಅತ್ಯಂತ ದುಃಖಿತರಾಗಿದ್ದೇವೆ ಅವರ ನಷ್ಟ ತುಂಬ ಭಾರವಾದ ನಷ್ಟವಾಗಿದೆ. ನಾನೂ ಕೂಡ ಸಭೆಯ ನಾಯಕರು ಮಂಡಿಸಿರತಕ್ಕ ನಿರ್ಣಯಕ್ಕೆ ನನ್ನ ಬೆಂಬಲ ಕೊಡುತ್ತಾ, ಅವರ ನಿಧನಕ್ಕಾಗಿ ನನ್ನ ಸಂತಾಪಗಳನ್ನು ವ್ಯಕ್ತಪಡಿಸುತ್ತೇನೆ.

*ಶ್ರೀ ಎ. ಆರ್. ನಾಯ್ಡು (ಮಲ್ಲೇಶ್ವರಂ).—ನಮ್ಮ ನಾಯಕರು ಹೇಳಿದಹಾಗೆ, ಮಾನ್ಯ ಶ್ರೀ ಮಾವಳಂಕರ್ ರವರು ದೈವಾಧೀನರಾದುದನ್ನು ಕೇಳಿ ಎಲ್ಲರಿಗೂ ತುಂಬ ಸಂತಾಪವುಂಟಾಗಿದೆ. ನಮ್ಮ ಇಂಡಿಯಾ ದೇಶದ ಜನತೆಗೆ ಮಾತ್ರವಲ್ಲದೆ ಇಡೀ ಜಗತ್ತಿನ ಜನತೆಗೂ ಅವರಲ್ಲಿ ವಿಶೇಷ ಗೌರವವಿತ್ತು. ಮೈಸೂರು, ಮಧ್ಯಪ್ರದೇಶ, ಬಿಂಗಾಳ ಮುಂತಾದ ಕಡೆಗಳಲ್ಲಿರುವ ಅಸೆಂಬ್ಲಿಗಳು ಸಣ್ಣವಾದರೂ ಹೆಚ್ಚಾಗಿ ಅಲ್ಲಿ ಗಲಾಟೆ ನಡೆಯುವುದನ್ನು ನಾವು ನೋಡುತ್ತಿದ್ದೇವೆ. ಈ ಅಸೆಂಬ್ಲಿಗಳ ಹತ್ತರಷ್ಟಕ್ಕಿಂತ ದೊಡ್ಡದಾದ ಪಾರ್ಲಿಮೆಂಟಿನಲ್ಲಿ ಅವರು ಸ್ಪೀಕರ್ ಆಗಿದ್ದರೂ ಒಂದು ಗಲಾಟೆ ಕೂಡ ಅಲ್ಲಿ ಆಗದಿರುವುದನ್ನು ನೋಡಿದರೆ ಅವರ ದಕ್ಷತೆ ಎಷ್ಟರಮಟ್ಟಿಗಿತ್ತೆಂಬುದು ತಮಗೆ ಗೊತ್ತಾಗುತ್ತದೆ. ಎಂಥ ದಕ್ಷರಾದರೂ ಅವರು ಜೀವಂತರಾಗಿದ್ದಾಗ ಅವರನ್ನು ಪ್ರಶಂಸೆ ಮಾಡುವುದಕ್ಕಿಂತ ಹೆಚ್ಚಾಗಿ ಅವರು ದೈವಾಧೀನರಾದ ಮೇಲೆ ಪ್ರಶಂಸೆ ಮಾಡುತ್ತಾರೆ. ಇದು ಪ್ರಪಂಚದಲ್ಲಿರುವ ಒಂದು ಸಂಪ್ರದಾಯ. ಆದರೆ ಮಾವಳಂಕರ್‌ರವರು ಬದುಕಿರುವಾಗಲೂ ಕೂಡ ಅವರ ಮಾತಿಗೆ ವಿಶೇಷ ಗೌರವ ಸಲ್ಲುತ್ತಿತ್ತು. ಅವರು ಯಾವ ರೀತಿ ದಕ್ಷರಾಗಿ ಎಲ್ಲ ಶಾಸನಸಭೆಗಳಿಗೂ ಮಾರ್ಗದರ್ಶಕರಾಗಿದ್ದರೆಂಬುದು ಎಲ್ಲರಿಗೂ ತಿಳಿದೇ ಇದೆ. ಅಂಥ ಮಹನೀಯರು ದಿವಂಗತರಾಗಿರುವುದು ಎಲ್ಲರಿಗೂ ಬಹಳ ಸಂಕಟವನ್ನುಂಟು ಮಾಡಿದೆ, ಪರಮಾತ್ಮನು ಅವರ ಆತ್ಮಕ್ಕೆ ಶಾಂತಿ ಕೊಡಲೆಂದು ಪ್ರಾರ್ಥಿಸುತ್ತೇನೆ.

*ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಶ್ರೀ ಮಾವಳಂಕರ್ ಅವರ ನಿಧನದ ವಾರ್ತೆ ಮನಸ್ಸಿಗೆ ಬಹಳ ನೋವನ್ನುಂಟುಮಾಡಿದೆ. ಅವರು ಹೋದುದು ನಮ್ಮ ದೇಶಕ್ಕೇ ಬಹಳ ದೊಡ್ಡ ಹಾನಿಯಾದಂತಾಗಿದೆಯೆಂಬುದು ಪ್ರತಿಯೊಬ್ಬರೂ—ಎದುರು ಪಕ್ಷದವರಾಗಲಿ ಅಥವಾ ಯಾವ ಕೋಮಿನವರಾಗಲಿ—ಒಪ್ಪುವ ವಿಷಯವಾಗಿದೆ. ಈ ರೀತಿ ಆಗಬಾರದಾಗಿತ್ತು; ಈಗ ಅವರು ನಿಧನ ಹೊಂದಿರುವುದು ನಮ್ಮ ಭಾರತದ ದುರ್ದೈವ. ಶ್ರೀ ಮಾವಳಂಕರ್‌ರವರನ್ನು ಕಳೆದುಕೊಂಡುದು, ಅದರಲ್ಲೂ ಕೂಡ ದೊಡ್ಡ ಅಂಥ ರಾಜಕಾರಣ ಪಟುಗಳನ್ನು ಕಳೆದುಕೊಂಡುದರಿಂದ ನಮ್ಮ ದೇಶ ತಬ್ಬಲಿಯಾದಂತಾಗಿದೆ ಎನ್ನಿಸುತ್ತಿದೆ. ನಾನು ಎರಡು ಮೂರು ಸಾರಿ ಅವರ ಸಭೆಗೆ ಹೋಗಿದ್ದೆ. ಅವರ ಮಾತು ಅವರ ಆಚರಣೆ ನೋಡಿ ನನಗೆ ಬಹಳ ಸಂತೋಷವಾಯಿತು. ಆದ್ದರಿಂದ ಈಗ ಎರಡು ಮಾತನ್ನು ಹೇಳಬೇಕೆನ್ನಿಸಿತು. ಯಾವಾಗಲೂ ಅವರ ಹೆಂಡತಿ ಅವರ ಜೊತೆಯಲ್ಲೇ ಇರುತ್ತಿದ್ದರು, ಆಕೆಗೆ ಬಹಳ ಕೆಲಸ ಅವರು ಕೊಡುತ್ತಿದ್ದುದನ್ನು ನಾನು ನೋಡಿದೆ. ಆ ಅನುಭವದಿಂದ ಎರಡು ಮಾತನ್ನು ಹೇಳಬೇಕೆಂದೆನಿಸಿತು. ಈ ದಿವಸ ಆ ಮಹಾತಾಯಿಗೆ ಎಷ್ಟೋ ದುಃಖವಾಗಿರಬೇಕು. ಯಾವ ಹೆಂಗಸಿಗೇ ಆಗಲಿ ಈ ದುಃಖವುಂಟಾಗಬಾರದು, ಆದರೆ ದೈವಲೀಲೆ, ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ. ಇಂಥ ಅತಿದಾರುಣವಾದ ದುಃಖವನ್ನು ಸಹಿಸಲು ಆಕೆಗೂ ಅವರ ಬಂಧುವರ್ಗದವರಿಗೂ ಭಗವಂತನು ಶಕ್ತಿ ಕೊಡಲೆಂದು ಪ್ರಾರ್ಥನೆ ಮಾಡುತ್ತೇನೆ.

*ಶ್ರೀ ಆರ್. ಚನ್ನಿಗರಾಮಯ್ಯ (ಕೊರಟಗೆರೆ ಮತ್ತು ಮಧುಗಿರಿ—ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ಶ್ರೀ ಮಾವಲಂಕರ್‌ರವರು ಪ್ರಿಸೈಡಿಂಗ್ ಆಫೀಸರ್ಸ್ ಕಾನ್ಫರೆನ್ಸ್ ಅಧ್ಯಕ್ಷತೆಯನ್ನು ವಹಿಸಿದ ಸಂದರ್ಭದಲ್ಲಿ ಎರಡು ಸಾರಿ ಅವರು ಅಧ್ಯಕ್ಷರಾಗಿ ದಕ್ಷತೆಯಿಂದ ಇಡೀ ಇಂಡಿಯಾ ದೇಶದ ಎಲ್ಲಾ ಭಾಗದಿಂದ ಬರತಕ್ಕ

(ಶ್ರೀ ಆರ್. ಚೆನ್ನಿಗರಾಮಯ್ಯ.)

ಪ್ರಿಸೈಡಿಂಗ್ ಆಫೀಸರುಗಳಿಗೆ ಯಾವ ರೀತಿ ಬುದ್ಧಿವಾದವನ್ನು ಹೇಳುತ್ತಿದ್ದರೆಂಬುದನ್ನು ಸ್ವತಃ ನೋಡತಕ್ಕ ಅವಕಾಶ ನನಗೆ ಸಿಕ್ಕಿತ್ತು. ಕಾಶ್ಮೀರದಲ್ಲಿಯೂ ಮತ್ತು ರಾಜಕೋಟೆಯಲ್ಲಿಯೂ ಪ್ರಿಸೈಡಿಂಗ್ ಆಫೀಸರ್ಸ್ ಕಾರ್ಖಫರೆನ್ಸ್ ನಡೆದಾಗ ನಾನು ಅದರಲ್ಲಿ ಭಾಗವಹಿಸಿದ್ದೆ. ಆಗ ಅವರು ಆಯಾ ದೇಶದ ಶಾಸನ ಸಭೆಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಯಾವ ರೀತಿ ದಕ್ಷತೆಯಿಂದ ವರ್ತಿಸಬೇಕು, ಅವರ ಕರ್ತವ್ಯವೇನು, ಸರ್ಕಾರದ ವಿಚಾರದಲ್ಲಿ ಮತ್ತು ಶಾಸನ ಸಭೆಗಳ ಅಧ್ಯಕ್ಷರ ಗೌರವ ಕಾಪಾಡುವ ವಿಚಾರದಲ್ಲಿ ಅವರ ಕರ್ತವ್ಯವೇನು ಎಂಬ ವಿಚಾರದಲ್ಲಿ ನಾನಾ ವಿಧವಾಗಿ ಬುದ್ಧಿವಾದ ಹೇಳಿದ್ದನ್ನು ನೋಡಿ ನಾನು ಬಹಳವಾಗಿ ಸಂತೋಷಪಟ್ಟೆ. ಅವರು, ಈಗಾಗಲೆ ನಮ್ಮ ಸಭಾನಾಯಕರು ಹೇಳಿದ ಹಾಗೆ, ನಮ್ಮ ಇಡೀ ಇಂಡಿಯಾ ದೇಶದಲ್ಲಿ ಬಹಳ ಮುಖ್ಯರಾದ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು, ಬಹಳ ದಕ್ಷರಾಗಿದ್ದರು ಎಂಬುದರಲ್ಲಿ ಏನೇನೂ ಸಂದೇಹವಿಲ್ಲವೆಂದು ಕಾಯಾ ವಾಚಾ ಮನಸಾ ಎಲ್ಲರೂ ಒಪ್ಪುವುದರಲ್ಲಿ ಅನುಮಾನವಿಲ್ಲ. ಅವರು ಪಾರ್ಲಿಮೆಂಟಿನ ಅಧ್ಯಕ್ಷರಾಗಿದ್ದು ಇಡೀ ಇಂಡಿಯಾ ದೇಶದ ಶಾಸನ ಸಭೆಗಳ ಗೌರವವನ್ನು ಕಾಪಾಡಿಕೊಂಡು ಬಂದಿದ್ದಾರೆ. ಅವರು ಪ್ರತಿದಿನ ಉತ್ತಮ ಗೊಳ್ಳುತ್ತಿದ್ದಾರೆ, ಸಭಾಧ್ಯಕ್ಷತೆ ಯಥಾಪ್ರಕಾರ ವಹಿಸುತ್ತಾರೆ ಎಂದು ಬೆಳಗಿನ ಪತ್ರಿಕೆಯನ್ನು ನೋಡಿ ಭಾವಿಸಿದೆ. ಆದರೆ ಈಗ ಸ್ವಲ್ಪ ಹೊತ್ತಿಗೆ ಮುಂಚೆ ಅವರು ವಿಧಿವಶರಾದರೆಂಬುದನ್ನು ಕೇಳಿ ಬಹಳ ವ್ಯಸನವಾಯಿತು. ಈ ಸಂದರ್ಭದಲ್ಲಿ ನಮ್ಮ ನಾಯಕರು ಹೇಳಿದ ಪ್ರತಿಯೊಂದು ಅಂಶವನ್ನೂ ಒಪ್ಪಿಕೊಂಡು ಈ ಸಂತಾಪದಲ್ಲಿ ನಾನೂ ಭಾಗಿಯಾಗಿ ಮೃತರ ಬಂಧುವರ್ಗದವರಿಗೆ ಈ ವ್ಯಸನವನ್ನು ಸಹಿಸಲು ಪರಮಾತ್ಮನು ತಕ್ಕಷ್ಟು ಶಕ್ತಿಯನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ.

12-30 P.M.

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ ಅನುನೂಚಿತ ಜಾತಿಗಳು.)—ಮಾನ್ಯ ಅಧ್ಯಕ್ಷರೇ, ಈಗ ತಾನೇ ಅನೇಕ ಮಾನ್ಯ ಸದಸ್ಯರುಗಳು ಈ ದಿವಸ ದಿವಂಗತರಾದಂಥ ಮಾನ್ಯ ಮಾವಲಂಕರ್ ಅವರ ವಿಷಯದಲ್ಲಿ ತಮ್ಮ ವ್ಯಸನವನ್ನೂ ಹಾಗೂ ಸಂತಾಪವನ್ನೂ ವ್ಯಕ್ತಪಡಿಸಿದ್ದಾರೆ. ಅದರಲ್ಲಿ ನಾನೂ ಭಾಗಿಯಾಗಿದ್ದೇನೆ. ಈ ದಿವಸ ದಿವಂಗತರಾದಂಥ ಆ ಶ್ರೀ ಮಾವಲಂಕರ್ ಅವರು ನಮ್ಮೆಲ್ಲರಿಗೂ ಬಹಳ ಹಿರಿಯ ವ್ಯಕ್ತಿಗಳಾಗಿದ್ದರು. ದೇಶದಲ್ಲಿ ಒಂದು ದೊಡ್ಡ ನಾಯಕ ಸ್ಥಾನವನ್ನು ನಂಪಾದನೆ ಮಾಡಿಕೊಂಡಿದ್ದರು. ಇಲ್ಲಿಗೆ ದೇಶದಲ್ಲಿ ಪ್ರಜಾಪ್ರಭುತ್ವವಾರಂಭವಾಗಿ ನಾಲ್ಕು ವರ್ಷಗಳಾದವು. ಈ ನಾಲ್ಕು ವರ್ಷಗಳ ಕಾಲದಲ್ಲಿ ಇವರು ಒಂದು ಅತ್ಯಂತ ಜವಾಬ್ದಾರಿಯುತವಾದ ಸ್ಥಾನವನ್ನು ಅಕ್ರಮಿಸಿಕೊಂಡಿದ್ದು, ಇವರು ಆ ಸ್ಥಾನದಲ್ಲಿದ್ದಾಗ ಕೊಟ್ಟಿರತಕ್ಕಂಥ ಅನೇಕ ರೂಲಿಂಗ್‌ಗಳೂ ಮತ್ತು ಪಾರ್ಲಿಯಮೆಂಟರಿ ಅಕ್ಟಿವಿಟೀಸ್‌ಗಳಿಗೆ ಸಂಬಂಧಪಟ್ಟಂಥ ಕಾರ್ಯಕ್ರಮಗಳಲ್ಲಿ ಇವರು ಸೂಚನೆ ಕೊಡುತ್ತಿದ್ದಂಥ ಅಭಿಪ್ರಾಯಗಳೂ ಇಡೀ ಪ್ರಪಂಚಕ್ಕೇ ಮಾದರಿಯವುಗಳಾಗಿದ್ದವು ಎಂದರೆ ಇದರಲ್ಲೇನೂ ಅತಿಶಯೋಕ್ತಿ ಇರುವುದಿಲ್ಲ. ಇಂಥ ಮಹನೀಯರು ಕೇವಲ ಶಾಸನ ಸಭೆಯ ನಡವಳಿಕೆಗಳ ಬಗ್ಗೆಯೇ ಅಲ್ಲದೆ ಇಡೀ ದೇಶಕ್ಕೇ ಒಬ್ಬ ಮಾರ್ಗದರ್ಶಿಗಳಾಗಿದ್ದರೆಂದು ನಾನಾದರೂ ಭಾವಿಸಿಕೊಂಡಿದ್ದೇನೆ. ಇವರು ಕೊಟ್ಟಿರತಕ್ಕ ರೂಲಿಂಗುಗಳ ಬಗ್ಗೆ ಆಳವಾಗಿ ಅವಲೋಕಿಸಿ ನೋಡುವುದಾದರೆ ಇವರಿಗೆ ಈ ಪಾರ್ಲಿಯಮೆಂಟರಿ ಕಾರ್ಯಕಲಾಪಗಳಲ್ಲಿ ಎಂಥ ಅನುಭವವಿತ್ತೆಂಬುದರ ಬಗ್ಗೆ ಇಡೀ ದೇಶವೇ ಇವರನ್ನು ಬಹಳವಾಗಿ ಮೆಚ್ಚಿಕೊಂಡಿತ್ತೆಂಬ ಅಂಶವನ್ನು ಈಗಾಗಲೇ ಈ ಮಾನ್ಯ ಸಭೆಯ ನಾಯಕರೂ ಹಾಗೂ ಅನೇಕ ಮಾನ್ಯ ಸದಸ್ಯರುಗಳೂ ವ್ಯಕ್ತಪಡಿಸಿರುತ್ತಾರೆ. ಇಷ್ಟೇ ಅಲ್ಲದೆ ಈ ಮಹನೀಯರು ದೇಶಕ್ಕೆ ಸ್ವಾತಂತ್ರ್ಯವನ್ನು ಗಳಿಸಲು ಹೂಡಿದ್ದ ಹೋರಾಟದಲ್ಲಿ ಬಹಳ ಉನ್ನತವಾದ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಇಂಥ ಒಬ್ಬ ಮಹಾನುಭಾವರಾದಂಥ ವ್ಯಕ್ತಿಗಳನ್ನು ನಾವು ಕಳೆದುಕೊಂಡಿದ್ದೇವೆ. ಇದು ನಮ್ಮ ದೇಶದ ದೌರ್ಭಾಗ್ಯ ಮತ್ತು ದುರದೃಷ್ಟ. ಈ ನಷ್ಟ ಇಡೀ ಪ್ರಪಂಚಕ್ಕೇ ಆಗುತ್ತಿದ್ದಂಥ ಹಿತಕ್ಕೆ ಒಂದು ಹಾನಿಯನ್ನು ಉಂಟು ಮಾಡಿದಂತಾಗಿದೆ ಎಂದು ಹೇಳಿದರೆ ಇದೇನೂ ಒಂದು ಅತಿಶಯವಾಗಲಾರದು. ಇವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕೊಡಲಿ. ಇವರ ಮನೆತನದವರಿಗೂ ಮತ್ತು ಇವರ ಕುಟುಂಬ ವರ್ಗದವರಿಗೂ ಇಂದು ಉಂಟಾಗಿರತಕ್ಕಂಥ ದುಃಖವನ್ನು ಹೊರಲು ಭಗವಂತನು ಅವರಿಗೆಲ್ಲಾ ಶಕ್ತಿಯನ್ನು ಕೊಡಲಿ; ಇಡೀ ದೇಶದಲ್ಲಿ ಜನತೆಗುಂಟಾಗಿರುವ ಈ ಮಹಾ ದುಃಖವನ್ನು ಸಹಿಸಲು ಭಗವಂತನು ಶಕ್ತಿಯನ್ನಿಯಲಿ ಎಂಬುದಾಗಿ ದೇವರನ್ನು ಪ್ರಾರ್ಥಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

*Sri M. PALANIYAPPAN (Ulsoor).—In the demise of Sri Mavalankar, the country has suffered an irreparable loss. Sri Mavlankar was the mother of the infant democracy of our country. He has taken care of democracy as a mother takes care of her children. It would have been better for the Indians if he had survived for a few more years and guided us for the prosperity of this nation. As Speaker he has done the greatest service to this land and also as a national leader he has proved himself as one of the top ranking leaders. His loss to this country has immersed us in great sorrow and it is very sad to note that in spite of the best medical treatment afforded to him he has left us. May I associate myself with the sorrowful sentiments expressed by the Leader of the House and pray that the great soul may rest in peace ?

Mr. SPEAKER.—I wish to associate myself with the sentiments of sorrow expressed by the Leader of the House and other Hon'ble Members who followed him on the sad demise of Sri Mavalankar. His name and his services to the country are too well known to be repeated on this occasion. But in recent years it was in the field of Parliamentary democracy that he directed his talent

and energies. As President of the Bombay Legislative Assembly from 1937 he had earned a great reputation before he was elected as Speaker of the Central Legislative Assembly in 1946. In 1947, his election, which was uncontested in the First Parliament of Free India, was therefore only to be expected. I would like to refer to one sentence in the speech by our Prime Minister on that occasion. He said : "With deference I congratulate not so much you but the House on the choice it has made." That would give us an idea of the place he occupied in India in the sphere of Parliamentary institutions.

I had also an opportunity to come into close contact with this great personage as a member of the Lok Sabha and also as Speaker of that august House. Anybody who knew him even slightly and those who were even slightly familiar with Parliament and its proceedings will have been struck by his keen awareness of the need to foster Parliamentary democracy and establish Parliamentary institutions on an independent footing. He was alive to the fact that if the Constitution had to be worked properly and democracy should attain any degree of reality, it was only in an independent Parliament and in independent Legislatures. He gave meaning and content to the provisions of the Constitution which dealt with these aspects. Not only in his rulings but also in his relationship with the Government he always stuck to this ideal. The Presiding Officers' Conference attained a status and value entirely due to his exertions. His loss is indeed irreparable.

I will now place this resolution before the House :

> " This House do stand adjourned for the day as a mark of respect to the memory of Shri G. V. Mavalankar, Speaker, Lok Sabha, who passed away this morning.
>
> " This House requests the Speaker to convey to the members of the bereaved family its sincere condolences."

And I request the Hon'ble Mmbers to rise in their seats and pass this resolution.

(*The Resolution was adopted, Members standing in silence for two minutes.*)

Mr. SPEAKER.—Now the House will adjourn and meet tomorrow at 12 o'clock as usual. To-day's entire business will be carried over to tomorrow.

The House adjourned at Forty Minutes past Twelve of the Clock to meet again at Twelve of the Clock on the next day, Tuesday, the 28th February 1956.